ಸೂಚಿಸಲು ರಚಿಸಲಾಗಿದ್ದ ಶ್ರೀ ಅಜ್ಜೀಬಾಳ ಹೆಗಡೆ ಸಮಿತಿಯು ಮಾಡಿದಂತಹ ಶಿಫಾರಸ್ಸುಗಳಲ್ಲಿ ಇಲಾಖೆಯಲ್ಲಿದ್ದ ಮಾರುಕಟ್ಟೆ ಸೇವೆ ಹಾಗೂ ಮಾರುಕಟ್ಟೆ ಸಮಿತಿ ಸೇವೆಗಳನ್ನು ಒಂದುಗೂಡಿಸಿ ಒಂದೇ ಸೇವೆಯನ್ನು ರಚಿಸಬೇಕೆಂದು ಸೂಚಿಸಿದ್ದು ಅದರ ಮೇಲೆರೆಗೆ ಕಾಯ್ದೆಗೆ 1991ರಲ್ಲಿ ತಿದ್ದುಪಡಿ ಮಾಡಿ ಒಂದೇ ಸೇವೆಯನ್ನು ರಚಿಸಲು ಅವಕಾಶ ಮಾಡಲಾಗಿದೆ. ಇದರಂತೆ 27/06/2995ನೇ ದಿನಾಂಕದಿಂದ ರಾಜ್ಯ ಕೃಷಿ ಮಾರಾಟ ಇಲಾಖೆ ಸೇವೆ ಜಾರಿಗೆ ಬಂದಿದೆ.

ಇಲಾಖೆಯಲ್ಲಿರುವ ವಿವಿಧ ಅಧಿಕಾರಿ/ಸಿಬ್ಬಂದಿ ಸೇವಾ ಸಂಘಗಳೊಂದಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಬಗ್ಗೆ ಸಭೆಗಳನ್ನು ಜರುಗಿಸಿ ವಿಚಾರ ವಿನಿಮಯ ಮಾಡಿಕೊಳ್ಳಲಾಗಿದೆ. ಸದರಿ ಕೃಷಿ ಮಾರಾಟ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲು ಈಗಾಗಲೇ ಹಲವಾರು ಸಭೆಗಳನ್ನು ನಡೆಸಲಾಗಿದೆ. ಸದರಿ ಸಭೆಗೆ ಆರ್ಥಿಕ ಇಲಾಖೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಕಾನೂನು ಇಲಾಖೆಯ ಮತ್ತು ಕೃಷಿ ಮಾರಾಟ ಇಲಾಖೆಯ ಉನ್ನತಾಧಿಕಾರಿಗಳು ಹಾಜರಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಿದಂತೆ ಅವಶ್ಯಕವಾದ ಮಾಹಿತಿಗಳನ್ನು ಪಡೆದು ನಿಯಮಗಳನ್ನು ಪರಿಷ್ಕರಿಸಿ ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪರಾಮರ್ಶೆಗೆ ಒಳಪಡಿಸಲು ಕ್ರಮವಿಡಲಾಗುತ್ತಿದೆ.

ಸರ್ಕಾರವು ಆದೇಶ ಸಂಖ್ಯೆ: ಆರ್‌ಡಿಸಿ 100 ಸಿಎಂಡಿ 74, ದಿನಾಂಕ: 30.10.75 ರಲ್ಲಿ ಮಾರುಕಟ್ಟೆ ಇಲಾಖೆಗೆ ಕಾರ್ಯಕಾರಿ ಆದೇಶದ ಮೂಲಕ ವಿವಿಧ ಪದವೃಂದದ ಹುದ್ದೆಗಳಿಗೆ ನೇಮಕಾತಿ ಬಡ್ತಿ ವಿಧಾನಗಳನ್ನು ನಿಗದಿಪಡಿಸಿದೆ. ಸದರಿ ಆದೇಶದಂತೆ ಮಾರುಕಟ್ಟೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿ/ಸಿಬ್ಬಂದಿಯ ನೇಮಕಾತಿ/ ಬಡ್ತಿ ನೀಡುವಿಕೆಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲಾಗಿದೆ. ಆದಕಾರಣ ಇಲಾಖೆಯ ಯಾವ ಅಧಿಕಾರಿ/ಸಿಬ್ಬಂದಿಗೂ ನಿಯಮ ಬಾಹಿರವಾಗಿ ಬಡ್ತಿ ನೀಡಲಾಗಿರುವುದಿಲ್ಲ.

ಆ) ಇಷ್ಟರಲ್ಲಿಯೇ ಕರಡು ನಿಯಮಗಳನ್ನು ಪ್ರಕಟಿಸಲಾಗುವುದು.
ಇದುವರೆವಿಗೆ ಜಾರಿಯಲ್ಲಿರುವ ಕಾರ್ಯಕಾರಿ ಆದೇಶಾನುಸಾರ ಕ್ರಮವಿಡಲಾಗುತ್ತಿದೆ.
ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯಲ್ಲಿ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ವಿತರಣೆಯಲ್ಲಿ ತಾರತಮ್ಯವಾಗಿರುವುದು

3233 (3721) ಶ್ರೀ ರೇವುನಾಯಕ್ ಬೆಳಮಗಿ (ಕಮಲಪುರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಪುನರ್‌ವಸತಿ ಪ್ರದೇಶದ ಸಂತ್ರಸ್ತ ಕುಟುಂಬಗಳಿಗೆ ಪರಿಹಾರವನ್ನು ಹಾಗೂ ಹೆಚ್ಚುವರಿ ಭೂಮಿಗೆ ಪರಿಹಾರಧನವನ್ನು ಮಂಜೂರು ಮಾಡಲಾಗಿದೆಯೇ;

ಆ) ಸದರಿ ಪುನರ್‌ವಸತಿ ಕೇಂದ್ರಗಳ ಪೈಕಿ ನಾಗೂರ ಗ್ರಾಮದ ಪುನರ್‌ವಸತಿ ಕೇಂದ್ರದ ಸಂತ್ರಸ್ತರಿಗೆ ಪುನರ್‌ವಸತಿ ಹಾಗೂ ಅವಶ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ;

ಇ) ಪರಿಹಾರ ನೀಡದ ಹಾಗೂ ಪುನರ್‌ವಸತಿ ಕಲ್ಪಿಸದ ಗ್ರಾಮಗಳ ಮತ್ತು ಕುಟುಂಬಗಳ ಸಂಖ್ಯೆ ಎಷ್ಟು;

ಈ) ಪರಿಹಾರ ನೀಡದೆ ಬಾಕಿ ಇರುವ ಕುಟುಂಬಗಳನ್ನು ಪುನಃ ಸರ್ವೆ ಮಾಡಿ ಪರಿಹಾರ ನೀಡಲು ಕೈಗೊಳ್ಳುವ ಕ್ರಮಗಳೇನು;

ಉ) ಯು.ಕೆ.ಪಿ. ಸಂತ್ರಸ್ತರಿಗೆ ಕೊಟ್ಟಂತೆ ಹೆಚ್ಚುವರಿ ಪರಿಹಾರ ಕೊಡಲು ಸರ್ಕಾರಕ್ಕಿರುವ ತೊಂದರೆಗಳೇನು; ವಿವರ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಬೆಣ್ಣೆತೋರಾ ಯೋಜನೆ ಅಡಿಯಲ್ಲಿ ಗುಲ್ಬರ್ಗಾ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಪುನರ್‌ವಸತಿಗೊಳಿಸಿರುವ ಪ್ರದೇಶದ ಸಂತ್ರಸ್ತರ ಕುಟುಂಬಗಳಿಗೆ ಪರಿಹಾರಧನ ಮಂಜೂರು ಆಗಿದ್ದು, ಪರಿಹಾರಧನ ವಿತರಿಸಲಾಗಿದೆ. ಸುಮಾರು 148 ಎಕರೆ ಹೆಚ್ಚುವರಿ ಭೂಮಿಯ ಭೂಸ್ವಾಧೀನದ ಪ್ರಕ್ರಿಯೆಯು ವಿವಿಧ ಹಂತದಲ್ಲಿರುತ್ತದೆ. ಹೆಚ್ಚುವರಿ ಭೂಮಿಗೆ ಪರಿಹಾರಧನ ಇನ್ನೂ ಮಂಜೂರಾಗಿರುವುದಿಲ್ಲ.

ಆ) ಸದರಿ ಪುನರ್‌ವಸತಿ ಕೇಂದ್ರಗಳ ಪೈಕಿ ನಾಗೂರ ಗ್ರಾಮದ ಪುನರ್‌ವಸತಿ ಕೇಂದ್ರದ ಸಂತ್ರಸ್ತರಿಗೆ ಪುನರ್‌ವಸತಿ ಹಾಗೂ ಅವಶ್ಯ ಸೌಲಭ್ಯಗಳಾದ ಕೂಡು ರಸ್ತೆ ನಿರ್ಮಾಣ, ಒಳರಸ್ತೆಗಳ ನಿರ್ಮಾಣ, ಸಾರ್ವಜನಿಕ ಕಟ್ಟಡಗಳಾದ ಶಾಲೆ, ಮಂದಿರ, ಮಸೀದಿ, ಸಮುದಾಯ ಭವನ ಹಾಗೂ ತಾತ್ಕಾಲಿಕ ಶೆಡ್ಡುಗಳನ್ನು ನಿರ್ಮಿಸಲಾಗಿದೆ. ನೀರು ಪೂರೈಕೆ ಹಾಗೂ ವಿದ್ಯುತ್ ಪೂರೈಕೆ ಕಾಮಗಾರಿಗಳು ಪ್ರಗತಿಯಲ್ಲಿದೆ.

ಇ) ಈ ಯೋಜನೆಯಲ್ಲಿ ಒಟ್ಟು 10 ಗ್ರಾಮಗಳು ಮುಳುಗಡೆಯಾಗಿದ್ದು, ಇವುಗಳನ್ನು 9 ಪುನರ್‌ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಪರಿಹಾರ ಧನ ನೀಡಬೇಕಾದ ಕಟ್ಟಡಗಳ ವಿವರಣೆ ಈ ರೀತಿ ಇದೆ.

1.	ಹರಕಂಚಿ	–	52 ಕಟ್ಟಡಗಳು
2.	ನಾಗೂರು	–	180 ಕಟ್ಟಡಗಳು
3.	ಕನ್ನಡಗಿ	–	1 ಕಟ್ಟಡಗಳು
	ಒಟ್ಟು	–	**233 ಕಟ್ಟಡಗಳು**

ಈ) ಪರಿಹಾರ ನೀಡದೆ ಬಾಕಿ ಇರುವ ಕುಟುಂಬಗಳನ್ನು ಪುನಃ ಸರ್ವೆ ಮಾಡಿ ಪರಿಹಾರ ನೀಡಲು ಪುನರ್‌ವಸತಿ ಸಲಹಾ ಸಮಿತಿಯ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆದ ನಂತರ ಪರಿಹಾರ ಧನ ನೀಡುವ ಪ್ರಕ್ರಿಯೆಯನ್ನು ಜಾರಿಗೊಳಿಸಲಾಗುವುದು.

ಉ) ಬೆಣ್ಣೆತೋರಾ ಯೋಜನೆಯನ್ನು 1972–73ನೇ ಸಾಲಿನಲ್ಲಿ ಪ್ರಾರಂಭಿಸಿದ್ದು, ಪರಿಹಾರ ಧನವನ್ನು ಈ ಯೋಜನೆಯಲ್ಲಿರುವ ಪುನರ್‌ವಸತಿ ಸಲಹಾ ಸಮಿತಿಯ ಶಿಫಾರಸ್ಸುಗಳನ್ವಯ ಪರಿಹಾರ ಧನವನ್ನು ನೀಡಲಾಗುತ್ತದೆ.

"ವರಾಹಿ ಯೋಜನೆ"ಯನ್ನು ಕರ್ನಾಟಕ ನೀರಾವರಿ ನಿಗಮ ಎತ್ತಿಕೊಳ್ಳುವ ಬಗ್ಗೆ

3234 (3652) ಶ್ರೀ ಸಭಾಪತಿ ಯು.ಆರ್. (ಉಡುಪಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?